ಈ) ಹೌದು, ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಬಸವರಾಜಪುರ, ಹೊಸಹಳ್ಳಿ ಗ್ರಾಮಗಳಲ್ಲಿ ಈ ಯೋಜನೆಯಡಿ ವಸತಿ ಸೌಲಭ್ಯ ಕಲ್ಪಿಸಲು ಮಂಜೂರಾತಿ ದೊರೆತಿದ್ದು ಮನೆ ಕಟ್ಟುವ ಕೆಲಸ ಪ್ರಗತಿಯಲ್ಲಿದೆ.

ಉ) ಇಲ್ಲ.

ಊ) ಇರುವುದಿಲ್ಲ.

ಋ) ಹೌದು.

ಅಳಿವ ಬಾಗಿಲಿನ ಬ್ರೇಕ್‌ವಾಟರ್ ಕೆಲಸ

೪೯೨ (೮೪೪) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮಂಗಳೂರು ಅಳಿವೆಬಾಗಿಲಿನ ದಕ್ಷಿಣ ಮತ್ತು ಉತ್ತರದ ಬ್ರೇಕ್‌ವಾಟರ್ ಕೆಲಸ ಎಲ್ಲಿಯವರೆಗೆ ಆಗಿರುತ್ತದೆ ?

ಆ) ಈ ಕಾರ್ಯಕ್ರಮ ಆ ರೀತಿ ನಿಧಾನವಾಗಲು ಕಾರಣವೇನು ?

ಇ) ಆ ಕೆಲಸ ಯಾವಾಗ ಸಂಪೂರ್ಣವಾಗಿ ಜನರ ಸಂಕಷ್ಟ ನಿವಾರಣೆಯಾಗುತ್ತದೆ ?

ಶ್ರೀ ವಸಂತ ವಿ. ಸಾಲಿಯಾನ್ (ಬಂದರು ಮತ್ತು ಮೀನುಗಾರಿಕೆ ಸಚಿವರು).—

ಅ) ಆರ್ಮೊರ್ ಕಪಚ ಹೊರತುಪಡಿಸಿ ಉತ್ತರ ೩೭೫ ಮೀ. ಮತ್ತು ದಕ್ಷಿಣ ೪೭೦ ಮೀ. ಉದ್ದದವರೆಗೆ ಬ್ರೇಕ್‌ವಾಟರ್ ಕೆಲಸವಾಗಿರುತ್ತದೆ.

ಆ) ಕಲ್ಲು ಗಣಿಗಳ ಅಭಾವದಿಂದ.

ಇ) ಡಿಸೆಂಬರ್ ೧೯೯೪ಕ್ಕೆ ಪೂರ್ಣ ಮುಗಿಯುತ್ತದೆ.

ರಾಜ್ಯದ ೧೯೯೩-೯೪ರ ಆಯವ್ಯಯದಲ್ಲಿ ಅಲ್ಪ ಸಂಖ್ಯಾತರ ಮಸೀದಿ ಹಾಗೂ ಇತರ ಕಟ್ಟಡಗಳ ನಿರ್ಮಾಣಕ್ಕೆ ನಿಗದಿಪಡಿಸಿದ ಹಣದ ಬಗ್ಗೆ

೪೯೪ (೬೮೭) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದ ೧೯೯೩-೯೪ರ ಆಯವ್ಯಯದಲ್ಲಿ ಅಲ್ಪ ಸಂಖ್ಯಾಂತರ ಮಸೀದಿ ಹಾಗೂ ದರ್ಗ, ಎಗೈರೆ ಕಟ್ಟಡಗಳ ನಿರ್ಮಾಣಕ್ಕೆ ಹಾಗೂ ದುರಸ್ತಿಗೆ ನಿಗದಿಪಡಿಸಿದ ಹಣವೆಷ್ಟು ? ಹಾಗೂ ಈವರೆಗೆ ಬಿಡುಗಡೆ ಮಾಡಿದ ಹಣವೆಷ್ಟು ?

ಆ) ರಾಜ್ಯದ ವಕ್ಫ್ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಅಲ್ಪ ಸಂಖ್ಯಾತರ ಮಸೀದಿ, ದರ್ಗ, ಎಗೈರೆ ದೇವಾಲಯಗಳ ಸಂಖ್ಯೆ ಎಷ್ಟು ?

ಇ) ಆಯವ್ಯಯದಲ್ಲಿ ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಹಣ ಬಿಡುಗಡೆ ಮಾಡದಿರುವುದರಿಂದ ಅಲ್ಪಸಂಖ್ಯಾಂತರ ಧಾರ್ಮಿಕ ಕಟ್ಟಡಗಳ ಕಾರ್ಯ ಕುಂಟಿತಗೊಂಡಿರುವುದನ್ನು ಸರ್ಕಾರ ಗಮನಿಸಿದೆಯೇ ?

ಈ) ಆ ಗುರಿ ಸಾಧಿಸಲು ಸರ್ಕಾರದ ನೀತಿ ಹಾಗೂ ಕಾರ್ಯಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು).—

ಅ) (೧) ಆಯವ್ಯಯದಲ್ಲಿ ನಿಗದಿ ಪಡಿಸಿದ ಹಣ ರೂ.೧೫೫ ಕೋಟಿ

(೨) ಮಂಜೂರು ಮಾಡಿರುವ ಹಣ ರೂ.೧.೩೦ ಕೋಟಿ

(೩) ಬಿಡುಗಡೆ ಮಾಡಿರುವ ಹಣ ರೂ.೯೧.೪೪ ಲಕ್ಷ.

ಅ) ಮಸೀದಿಗಳು ೧೧,೧೬೬

ಇದ್ಗಾಗಳು ೧,೭೯೪

ದರ್ಗಗಳು ೪,೪೦೩

ಖಬ್ರಿಸ್ತಾನ್(ಶ್ಮಶಾನಗಳು) ೨,೬೨೯

ಆಪುರ್ ಖಾನ್‌ಗಳು(ಮೊಹರಂ ಮಾಡುವ ಜಾಗ) ೮೬೦

ಇ) ''ಇಲ್ಲ''

ಈ) ವಕ್ಫ್ ಸಂಸ್ಥೆಗಳ ವಿವಿಧ ಕಾರ್ಯಕ್ರಮಗಳಿಗೆ ಸರ್ಕಾರವು ಪ್ರತಿ ವರ್ಷ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

ಸೇಡಂ ತಾಲ್ಲೂಕಿನ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ೧೯೯೨ ರಿಂದ ೧೯೯೪ನೇ ಸಾಲಿನಲ್ಲಿ ಖರ್ಚಾಗಿರುವ ಹಣ

೪೯೭ (೭೮೩) ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ,(ಸೇಡಂ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ೧೯೯೨-೯೩ ೧೯೯೩-೯೪ ಸಾಲುಗಳಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ಖರ್ಚಾಗಿರುವ ಹಣವೆಷ್ಟು ?

ಆ) ಆಯಾ ಶೀರ್ಷಿಕೆಗಳ ಕೆಲಸಕ್ಕೆ ತಗಲಿರುವ ಖರ್ಚು ಎಷ್ಟು ? (ಗ್ರಾಮವಾರು ವಿವರ ನೀಡುವುದು)

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

ಅ) ವಿವರವು ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಖರ್ಚು ಮಾಡಿದ ಹಣ ೧೯೯೨-೯೩	೧೯೯೩-೯೪
೧.	ಸಾಮಾಜಿಕ ಅರಣ್ಯ ಯೋಜನೆ	೪.೩೭೮	೧.೫೨೧
೨.	ಭೂಸಾರ ಸಂರಕ್ಷಣೆ ಯೋಜನೆ (ಅರಣ್ಯೀಕರಣ)	೦.೨೬೪	೦.೦೭೭
೩.	ಶಾಲಾ ಸಸ್ಯಕ್ಷೇತ್ರ	೦.೦೬೦	೦.೧೧೦
೪.	ಜವಾಹರ್‌ರೋಜಗಾರ್ ಯೋಜನೆ(ಜೆಆರ್‌ವೈ)	೨.೧೫೭	೩.೫೭೧
೫.	ಬರಗಾಲ ಪೀಡಿತ ಪ್ರದೇಶ ಯೋಜನೆ (ಡಿಪಿಎಪಿ)	೩.೦೦೦	೨.೦೦೦
೬.	ಉದ್ಯೋಗ ಭರವಸೆ ಯೋಜನೆ (ಇಎಎಸ್)	—	೦.೫೦೦
	ಒಟ್ಟು	೯.೮೫೯	೭.೭೭೯

ಆ) ಅನುಬಂಧ—೧ರಲ್ಲಿ ಹಾಗೂ ಶೀರ್ಷಿಕೆ ಕೆಲಸಕ್ಕೆ ಅನುಬಂಧ IIರಲ್ಲಿ ಒದಗಿಸಲಾಗಿದೆ.